**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 15.04.2026**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ನಂ 6 ರ ಪರ ಶ್ರೀ ಹೆಚ್ ಸಿ ಎಂ ಕೆ ವಕೀಲರಿಂದ**

1. ನಲ್ಲೂರು ಗ್ರಾಮದಲ್ಲಿ ವಾಸವಿದ್ದೆ ಎಂದು ತಿಳಿಸಿದ್ದು ಅದರ ಸರ್ವೆ ನಂಬರ ನನಗೆ ಗೊತ್ತಿಲ್ಲ. ದಾವಾಸ್ವತ್ತಿನ ಸರ್ವೆ ನಂಬರ ಮತ್ತು ಸದರಿ ನಲ್ಲೂರು ಗ್ರಾಮದಲ್ಲಿ ಇರುವ ಸರ್ವೆ ನಂಬರ ಬೇರೆ ಬೇರೆ ಇರಬಹುದು ನನಗೆ ಗೊತ್ತಿಲ್ಲ. ಸದರಿ ಮನೆಗು ಮತ್ತು ದಾವಾಸ್ವತ್ತಿಗೂ ಅರ್ಧ ಕಿ ಮಿ ಅಂತರ ಇರುತ್ತದೆ . ಸದರಿ ಮನೆ ನಮ್ಮ ಅಜ್ಜಿಯವರಿಂದ ನಮ್ಮ ತಂದೆಗೆ ಬಂದಿರುತ್ತದೆ . ಸದರಿ ಮನೆಯನ್ನು ಈ ದಾವೆಯಲ್ಲಿ ತೋರಿಸಿರುವುದಿಲ್ಲ. 2016 ರಲ್ಲಿ ರಂಗರಾಜುರವರು ಒ ಎಸ್ 22/2016ರನ್ನು ಹೂಡಿದಂತಹ ಸಮಯದಲ್ಲಿ ದಾವಾಸ್ವತ್ತು ಪ್ರತಿವಾದಿ ನಂ 6 ರವರಿಗೆ ಮಾರಾಟ ಆಗಿರುವ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಸದರಿ ರಂಗರಾಜುರವರು ನಮ್ಮಗಳ ವಿರುದ್ಧ ಪ್ರತಿವಾದಿ 6 ರವರಿಗೆ ದಾವಾಸ್ವತ್ತನ್ನು ಮಾರಾಟ ಮಾಡಿದ್ದು ಅದೆ ಸ್ವತ್ತನ್ನು ಅವರಿಗೆ ಒಪ್ಪಂದ ಪತ್ರ ಮಾಡಿಕೊಟ್ಟಿದ್ದು ಅದಕ್ಕೆ ರಂಗರಾಜುರವರು ಮುಂಗಡ ಹಣವನ್ನು ವಾಪಸು ನೀಡುವಂತೆ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ.

2. ರಂಗರಾಜುರವರು ನಮ್ಮ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿದ್ದರು ಎಂದರೆ ಸರಿ . ಸದರಿ ದಾವೆಯನ್ನು ನಾನು ಮತ್ತು ಇತರೆ 1 ರಿಂದ 5 ರ ಪ್ರತಿವಾದಿಗಳು ಒಟ್ಟಾಗಿ ನಡೆಸುತ್ತಿದ್ದೆವೆ ಎಂದರೆ ಸರಿ . ನಾನು ಮದುವೆಯಾಗುವ ಪೂರ್ವದಲ್ಲಿ ನನ್ನ

ತಂದೆಯವರು ನಮ್ಮ ಕುಟುಂಬದ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುತಿದ್ದರು ಎಂದರೆ ಸರಿ . ಈಗಲೂ ನನ್ನ ತಂದೆ ನನ್ನ ತಮ್ಮ ಮತ್ತು ತಾಯಿಯನ್ನು ಅವರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ . ನನ್ನ ತಂದೆಗೆ ದಾವಾಸ್ವತ್ತು ಅವರ ತಾಯಿಂದ ಬಂದಿದ್ದು ಅವರಿಗೆ ಮಾರಾಟ ಮಾಡುವ ಸಂಪೂರ್ಣ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

3. ನಿಪಿ 5 ರ ಪ್ರಕಾರ 6 ನೆ ಪ್ರತಿವಾದಿಗೆ ಕುಟುಂಬದ ಕಾನೂನು ಬದ್ದ ಅವಶ್ಯಕತೆಗಾಗಿ ನನ್ನ ತಂದೆಯವರು ದಾವಾಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 5 ರಂತೆ ಕ್ರಯ ಪತ್ರ ಆಗಿದ್ದಾಗಿಂನಿಂದಲೂ ಪ್ರತಿವಾದಿ 6 ರವರೆ ದಾವಾಸ್ವತ್ತಿನ ವ್ಯವಸಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಇತರೆ ಪ್ರತಿವಾದಿಗಳಿಂದ ಸೇರಿಕೊಂಡು ನಾನು ಅಕ್ರಮ ಲಾಭಾವನ್ನು ಪಡೆಯುವ ಉದ್ದೇಶದಿಂದ ಸದರಿ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೆ ಹಕ್ಕು ಇರುವುದಿಲ್ಲ ಹಾಗೂ ಪರ್ಯಾಯ ಪಡೆಯಲು ಅರ್ಹರಳಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/–

ಪ್ರ ದ ನ್ಯಾದಂ, ಕುಶಾಲನಗರ